ಲಲಿತಾಂಬಿಕಾ





ದೇವಾಲಯದ ಮುಂಭಾಗ







ಕಿರು ಗೋಪುರ

ಇದರಲ್ಲಿ ವೀರಭದ್ರ, ಗಜಾಸುರ ಸಂಹಾರ, ಶಿವ, ಯೋಗಾನರಸಿಂಹ, ವಿಷ್ಣು, ದರ್ಪಣ ಸುಂದರಿಯಂತಹ ಶಿಲ್ಪಗಳೂ ಸೇರಿವೆ.

ಬಂದಳಿಕೆಯ ತ್ರಿಮೂರ್ತಿನಾರಾಯಣ ದೇವಾಲಯವು ಪುನರ್ ನಿರ್ಮಾಣಗೊಂಡರೂ ಮೊದಲ ನೋಟಕ್ಕೆ ಇದೊಂದು ಅಪೂರ್ಣ ಮಂದಿರವೆನಿಸದಿರದು. ಪೂರ್ವದಿಕ್ಕಿನ ಇದರ ಗೋಡೆಯು ಬೋಳು ಬೋಳಾಗಿ ಕಾಣಬರುವುದೇ ಇದಕ್ಕೆ ಕಾರಣ. ಈ ದೇವಾಲಯ ಹಿಂದೆಯೇ ಶಿಥಿಲಗೊಂಡಿದ್ದರಿಂದ ಬಹುಶಃ ಪುನರ್ನಿಮಾಣ ಸಮಯದಲ್ಲಿ ಈ ಭಾಗದ ಸಾಮಗ್ರಿಗಳ ಅಲಭ್ಯತೆಯೇ ಈ ಅಪೂರ್ಣತೆಗೆ ಕಾರಣವಿರಬಹುದು. ಪೂರ್ವಕಾಲದಲ್ಲಿ ಇಲ್ಲೊಂದು ವಿಶಾಲವಾದ ನವರಂಗವಿದ್ದಿರಬಹುದೆಂಬುದು ಈಗೊಂದು ಊಹೆಯಷ್ಟೆ. ಇನ್ನು ದೇವಾಲಯದ ಮುಖ್ಯ ಕಟ್ಟಡದಿಂದ ಸುಮಾರು 30ಅಡಿ ದೂರದಲ್ಲಿ ಮಳೆಬಿಸಿಲಿಗೆ ತೆರೆದುಕೊಂಡು ಪಶ್ಚಿಮಾಭಿಮುಖವಾಗಿ ಕುಳಿತಿರುವ ನಂದಿಯನ್ನು ಇತ್ತೀಚೆಗಷ್ಟೇ ಇಲ್ಲಿ ಸ್ಥಾಪಿಸಿದಂತೆ ಕಾಣುತ್ತದೆ. ಇದೊಂದು ವಿರೂಪಗೊಂಡ ವಿಗ್ರಹವೂ ಹೌದು.

ತ್ರಿಮೂರ್ತಿ ನಾರಾಯಣ ದೇವಾಲಯದ ಪೂರ್ವಕ್ಕೆ ಸುಮಾರು ಮುನ್ನೂರು ಮೀಟರ್ ದೂರದಲ್ಲಿ ಸೋಮೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಆನೇಕಾಲು ಸೋಮಯ್ಯ ಅಥವಾ ಬೊಪ್ಪೇಶ್ವರ ದೇವಾಲಯವೆಂತಲೂ ಕರೆಯುವ ವಾಡಿಕೆಯಿದೆ. ಈ ದೇವಾಲಯವನ್ನು ಕ್ರಿ.ಶ. 1274ರಲ್ಲಿ ಬೊಪ್ಪಸೆಟ್ಟಿ ಎಂಬುವನು ನಿರ್ಮಾಣಮಾಡಿದನು. ಇದೂ ಪೂರ್ವಕ್ಕೆ ಮುಖಮಾಡಿದ್ದು ತಳವಿನ್ಯಾಸದಲ್ಲಿ ಅಂತರಾಳ, ಸ್ಥಂಭಗಳ ಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ.

ಈ ಮಂದಿರದ ಅತಿ ಮುಖ್ಯ ಆಕರ್ಷಣೆಯೆಂದರೆ ಹೊರದ್ವಾರ ಹಾಗೂ ದ್ವಾರದ ಎಡಬಲಕ್ಕಿರುವ ಎತ್ತರವಾದ ಜಾಲಾಂದ್ರ ಕಿಟಕಿಗಳು. ದ್ವಾರವು ನಾಲ್ಕು ಶಾಖೆಗಳ ದ್ವಾರಬಂಧವನ್ನು ಹೊಂದಿದ್ದು ಇದು ಅತ್ಯಂತ ಸುಂದರ ಹೂ ಬಳ್ಳಿಗಳ ಶಿಲ್ಪದಿಂದ ಅಲಂಕೃತಗೊಂಡಿದೆ. ದ್ವಾರತಲದಲ್ಲಿ ಸುಂದರವಾಗಿ ಕೆತ್ತಲ್ಪಟ್ಟಿರುವ ದ್ವಾರಪಾಲ ಮತ್ತು ಅಪ್ಸರೆಯರ ಶಿಲ್ಪಗಳಿವೆ.

ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರಣವಿದೆ. ದ್ವಾರದ ಎಡಭಾಗದಲ್ಲಿರುವ ಜಾಲಾಂದ್ರವು ಸುಸ್ಥಿತಿಯಲ್ಲಿದ್ದು ಇದರಲ್ಲಿ ರಾಮಾಯಣ ಹಾಗೂ ಮಹಾಭಾರತ ಕಥಾನಕಗಳ ನಿರೂಪಣಾ ಚಿತ್ರಗಳಿವೆ. ಆದರೆ ದ್ವಾರದ ಬಲಭಾಗದಲ್ಲಿರುವ ಜಾಲಾಂದ್ರವು ಮುಕ್ಕಾಲು ಪಾಲು ವಿರೂಪಗೊಂಡಿದ್ದರೂ ಅದರಲ್ಲಿರುವ ದಶಕಂಠನು ಸೀತೆಯನ್ನು ಹೊತ್ತೊಯ್ಯುವ ಶಿಲ್ಪವು ಗಮನಸೆಳೆಯುತ್ತದೆ. ತ್ರಿಮೂರ್ತಿ ನಾರಾಯಣ ಹಾಗೂ ಸೋಮೇಶ್ವರ ದೇವಾಲಯಗಳ ದಕ್ಷಿಣದ ಅಂಚಿನಲ್ಲಿ ಕೆಲವು ಮಹಾಸತಿ ಕಲ್ಲುಗಳು ಮತ್ತು ವೀರಗಲ್ಲುಗಳ ಜೊತೆಗೆ ಒಂದು ಶಿಲಾಶಾಸನವನ್ನು ನೆಡಲಾಗಿದೆ. ಇನ್ನು ಇದೇ ಸಮುಚ್ಛಯದಲ್ಲಿ ತ್ರಿಮೂರ್ತಿನಾರಾಯಣ ಹಾಗೂ ಸೋಮೇಶ್ವರ ದೇವಾಲಯಗಳ ಮಧ್ಯೆ ಇರುವ ಎರಡು ಎತ್ತರವಾದ ಮಣ್ಣು ದಿಬ್ಬಗಳಮೇಲೆ ಪುನರ್‌ನಿರ್ಮಾಣಗೊಂಡಿರುವ ಮಹಾನವಮಿದಿಬ್ಬ ಹಾಗೂ ಸಹಸ್ರಲಿಂಗದ ಕಟ್ಟಡಗಳಲ್ಲಿ ಅಂತಹ ವಿಶೇಷವಾದುದೇನೂ ಕಾಣಬರುವುದಿಲ್ಲ.